

بسم اللهِ الرّحمٰنِ الرّحيم

# ಆರ್ಥಿಕ ತ್ಯಾಗ : ತಹ್‌ರೀಕ್ ಜದೀದ್ ಹೊಸ ವರ್ಷ 2020–21

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹರ್ಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **06-11-2020** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

(ತಶಹ್ಹುದ್, ತಅವ್ವುಝ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹರ್ಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ *ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು:*

اَلَّذِيْنَ يُنْفِقُوْنَ اَمْوَالَهُمْ بِالَّيْلِ وَالنَّهَارِ سِرًّا وَّعَلَانِيَةً فَلَهُمْ اَجْرُهُمْ عِنْدَ رَبِّهِمْ ۚ وَلَا خَوْفٌ عَلَيْهِمْ وَلَا هُمْ يَحْزَنُوْنَ

**ಅಲ್ಲಧೀನ ಯುನ್‌ಫಿಖೂನ ಅಮ್‌ವಾಲಹುಮ್ ಬಿಲ್ಲೈಲಿ ವನ್ನಹಾರಿ ಸಿರ್‌ರನ್ ವ ಅಲಾನಿಯತನ್ ಫಲಹುಂ ಅಜ್‌ರುಹುಂ ಇಂದರಬ್ಬಿಹಿಂ ವಲಾ ಖೌಫುನ್ ಅಲೈಹಿಂ ವಲಾಹುಂ ಯಹ್‌ಝುನೂನ್.**

ಅರ್ಥ: ಅಲ್ಲಾಹನ ಮಾರ್ಗದಲ್ಲಿ ಗೋಪ್ಯವಾಗಿಯೂ ಬಹಿರಂಗವಾಗಿಯೂ ರಾತ್ರಿಯಲ್ಲೂ ಹಗಲಿನಲ್ಲೂ ತಮ್ಮ ಧನವನ್ನು ವ್ಯಯಮಾಡುವವರಿಗೆ ಅವರ ಪ್ರಭುವಿನಿಂದ ಅವರ ಕೃತ್ಯಗಳ ಪ್ರತಿಫಲವಿದೆ. ಅವರಿಗೆ ಭಯವೇನೂ ಉಂಟಾಗದು; ಅವರು ದುಃಖಿತರೂ ಆಗಲಾರರು. (2:275)

ಪವಿತ್ರ ಖುರ್‌ಆನಿನ ಹಲವೆಡೆಗಳಲ್ಲಿ ಅಲ್ಲಾಹನು ಧನತ್ಯಾಗಗಳ ಕಡೆಗೆ ಸತ್ಯವಿಶ್ವಾಸಿಗಳ ಗಮನ ಸೆಳೆದಿದ್ದಾನೆ. ಈ ವಚನದಲ್ಲೂ ಸತ್ಯವಿಶ್ವಾಸಿಗಳ ಈ ವಿಶೇಷತೆಯನ್ನು ಪ್ರಸ್ತಾಪಿಸುತ್ತಾ ಹೇಳಿರುವುದೇನೆಂದರೆ, ಅವರು ಅಲ್ಲಾಹನ ಮಾರ್ಗದಲ್ಲಿ ದಿನರಾತ್ರಿ ಖರ್ಚು ಮಾಡುತ್ತಾರೆ ಮತ್ತು ಅವರ ಈ ಖರ್ಚು ಮಾಡುವಿಕೆ ಕೆಲವೊಮ್ಮೆ ರಹಸ್ಯವಾಗಿಯೂ ಕೆಲವೊಮ್ಮೆ ತೋರಿಸಿಯೂ ಆಗಿರುತ್ತದೆ. ಅಲ್ಲಾಹನ ಬಳಿಯಲ್ಲಿ ಈ ಉಭಯ ಮಾರ್ಗಗಳೂ ಸ್ವೀಕಾರ್ಯದ ಸ್ಥಾನವನ್ನು ಪಡೆದಿವೆ. ಏಕೆಂದರೆ, ಸತ್ಯವಿಶ್ವಾಸಿಗಳು ಅಲ್ಲಾಹನ ಮಾರ್ಗದಲ್ಲಿ, ಅಲ್ಲಾಹನ ಸಂಪ್ರೀತಿಯನ್ನು ಗಳಿಸುವ ಉದ್ದೇಶದಿಂದ ಖರ್ಚು ಮಾಡುತ್ತಾರೆಂದು ಅಲ್ಲಾಹನು ಮತ್ತೊಂದೆಡೆ ಹೇಳಿದ್ದಾನೆ. **ವಮಾ ತುನ್‌ಫಿಖೂನ ಇಲ್ಲಬ್‌ತಿಘಾಅ ವಜ್‌ಹುಲ್ಲಾಹ್**. ಎಂದರೆ, ಅಲ್ಲಾಹನ ಸಂಪ್ರೀತಿಯನ್ನು ಗಳಿಸಿಲಿಕ್ಕಾಗಿ ಅವರು ಖರ್ಚು ಮಾಡುತ್ತಾರೆ ಮತ್ತು ಅಲ್ಲಾಹನ ಸಂಪ್ರೀತಿಯ ಗಳಿಕೆಯ ಹೊರತು ಬೇರೆ ಯಾವುದಕ್ಕೂ ಎಂದಿಗೂ ಖರ್ಚು ಮಾಡುವುದಿಲ್ಲ, ಎಂದರೆ, ಅವರ ಉದ್ದೇಶವೇ ಅಲ್ಲಾಹನ ಸಂಪ್ರೀತಿಯಾಗಿರುತ್ತದೆ. ಒಟ್ಟಿನಲ್ಲಿ, ಒಳಿತುಗಳನ್ನು ಮಾಡುವುದು, ಅಲ್ಲಾಹನ ಮಾರ್ಗದಲ್ಲಿ ತನ್ನ ಪರಿಶುದ್ಧ ಧನದಿಂದ ಖರ್ಚು ಮಾಡುವುದು, ದಿನರಾತ್ರಿಗಳಲ್ಲಿ ಒಳಿತುಗಳನ್ನು ಮಾಡುವುದರ ಬಗ್ಗೆ ಯೋಚಿಸುವುದು, ಕೆಲವೊಮ್ಮೆ ತೋರಿಸಿ ಒಳಿತುಗಳನ್ನು ಮಾಡುವುದು, ಕೆಲವೊಮ್ಮೆ ರಹಸ್ಯವಾಗಿ ಸತ್ಕರ್ಮಗಳನ್ನು ಮಾಡುವುದು, ಇವುಗಳು ಒಬ್ಬ ನೈಜ ಸತ್ಯವಿಶ್ವಾಸಿಯ ಲಕ್ಷಣಗಳಾಗಿವೆ. ಅಲ್ಲಾಹನ ಸಂಪ್ರೀತಿಯ ಗಳಿಕೆಯು ಈ ತ್ಯಾಗಗಳ ಉದ್ದೇಶವಾಗಿರಬೇಕು ಎಂಬ ಶರತ್ತಿನೊಂದಿಗೆ ಈ ತ್ಯಾಗಗಳು ಅಲ್ಲಾಹನ ಸನ್ನಿಧಿಯಲ್ಲಿ ಸ್ವೀಕಾರ್ಯವಾಗುತ್ತವೆ. ಕೇವಲ ತೋರಿಕೆಯ ತ್ಯಾಗಗಳೆಂದಾದರೆ, ಅವುಗಳು ಅಲ್ಲಾಹನ ಬಳಿಯಲ್ಲಿ ಅಂಗೀಕಾರದ ಪದವಿಯನ್ನು ಪಡೆಯುವುದಿಲ್ಲ. ಇದಾಗಿದೆ ಅದರ ತಿರುಳು. ಅದನ್ನು ಗಮನದಲ್ಲಿಟ್ಟುಕೊಂಡು ಒಬ್ಬ ಸತ್ಯವಿಶ್ವಾಸಿ ತ್ಯಾಗಗಳನ್ನು ಮಾಡಬೇಕಾಗಿದೆ. ಈ ಒಂದು ಸ್ಫೂರ್ತಿಯೊಂದಿಗೆ ಜಮಾಅತಿನ ವ್ಯಕ್ತಿಗಳು ಅಲ್ಲಾಹನ ಕೃಪೆಯಿಂದ ತ್ಯಾಗಗಳನ್ನು ಮಾಡುತ್ತಾರೆ.

ತ್ಯಾಗಗಳನ್ನು ಮಾಡಿದ ಕಾರಣದಿಂದ ಅಲ್ಲಾಹನ ಅನುಗ್ರಹಗಳಿಗೆ ಪಾತ್ರರಾದವರ ಮತ್ತು ಸಂಪತ್ತನ್ನು ಖರ್ಚು ಮಾಡಲು ಅಲ್ಲಾಹನ ಕಡೆಯಿಂದ ಪ್ರೇರಣೆ ಲಭಿಸಿದ ನಂತರ ಅಲ್ಲಾಹನು ಅವರಿಗೆ ನೀಡಿದ ವರದಾನಗಳ ಕೆಲವು ಘಟನೆಗಳನ್ನು ಈಗ ನಾನು ನಿಮ್ಮ ಮುಂದಿರಿಸುತ್ತೇನೆ.

ಬೈಅತ್ ಮಾಡಿದ ನಂತರ ಅಲ್ಲಾಹನ ಸಂಪ್ರೀತಿ ಪಡೆಯಲಿಕ್ಕಾಗಿ ಯಾವ ರೀತಿಯಲ್ಲಿ ಸಂಪತ್ತನ್ನು ಖರ್ಚು ಮಾಡುವ ಹಂಬಲವಿರುತ್ತದೆ ಎಂಬುದಕ್ಕೆ ಒಂದು ಉದಾಹರಣೆಯನ್ನು ಅಲ್‌ಬೇನಿಯಾದ ಮುಬಲ್ಲಿಗ್ ಸಮದ್ ಸಾಹಿಬ್ ಬರೆಯುತ್ತಾರೆ: ಜಲ್ಸ ಸಾಲಾನ 2020ರ ನನ್ನ ಸಮಾರೋಪ ಭಾಷಣವನ್ನು ಅಲ್‌ಬೇನಿಯಾದ ಒಬ್ಬ ನವ ಅಹ್ಮದಿ ಸಹೋದರ ಜಾಫರ್ ಕೋಚಿ ಸಾಹಿಬರು ಕೇಳುತ್ತಿದ್ದರು. ನಾನು ಅದರಲ್ಲಿ ಅವರ ಅಹ್ಮದಿಯ್ಯತ್ ಸ್ವೀಕಾರದ ಬಗ್ಗೆ ಸಹ ಪ್ರಸ್ತಾಪಿಸಿದ್ದೆ. ಆಗಸ್ಟ್ ತಿಂಗಳ ತನಕ ಅವರಿಗೆ ಯಾವುದೇ ಆದಾಯವಿದ್ದಿರಲಿಲ್ಲ. ಅವರು ಮುಬಲ್ಲಿಗ್ ಸಾಹಿಬರೊಂದಿಗೆ ಚಂದಾದ ವಿವರಗಳನ್ನು ಕೇಳಿದರು. ಅವರಿಗೆ ಪುನಃ ಚಂದಾಗಳ ಬಗ್ಗೆ ಪರಿಚಯಪಡಿಸಿ ಕೊಡಲಾಯಿತು. ಅನಂತರ ಅದೇ ತಿಂಗಳು ಅವರ ಫ್ಲೇಟ್ ಬಾಡಿಗೆಗೆ ಕೊಡಲಾಯಿತೆಂದೂ ಅದರ ಬಾಡಿಗೆ ಅವರಿಗೆ ಸಿಕ್ಕಿದೆಯೆಂದೂ ಅವರು ಹೇಳಿದರು. ಈ ಮೊದಲ ವರಮಾನದಿಂದ ಅವರು ಪಾವತಿಸಬೇಕಾದ ಚಂದಾದ ದರಕ್ಕಿಂತ ಹೆಚ್ಚಿನ ಚಂದಾವನ್ನು ತಂದಿದ್ದರು. ಮುಬಲ್ಲಿಗ್ ಸಾಹಿಬರು ಹೇಳುತ್ತಾರೆ: ಧನತ್ಯಾಗ ಮಾಡುವವರಿಗೆ ವರ್ಧಿಸಿ ಕೊಡುತ್ತಾನೆ ಎಂದು ಅಲ್ಲಾಹನು

ಪವಿತ್ರ ಖುರ್‌ಆನಿನಲ್ಲಿ ವಾಗ್ದಾನ ಮಾಡಿದ್ದಾನೆ ಎಂದು ನಾನು ಅವರೊಡನೆ ಹೇಳಿದೆ. ಆಗ ಅವರು ಹೇಳಿದರು: 'ನಾನು ಈ ಉದ್ದೇಶದಿಂದ ಚಂದಾವನ್ನು ನೀಡಿಲ್ಲ, ಬದಲಾಗಿ, ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಮತ್ತು ದೀನಿಗಾಗಿ ಧನತ್ಯಾಗಗಳನ್ನು ಮಾಡಲು ಹಝ್ರತ್ ಮಸೀಹ್ ಮೌಊದ್[ಅ]ರ ನಿರ್ದೇಶನವಿದೆ ಹಾಗೂ ದೀನಿಗಾಗಿ ಸಾಂಪತ್ತಿಕ ತ್ಯಾಗವನ್ನು ಮಾಡಬೇಕೆಂಬುದು ಇಸ್ಲಾಮಿನ ಆಜ್ಞೆ ಸಹ ಆಗಿದೆ. ಈ ಕಾರಣದಿಂದ ನಾನು ಚಂದಾವನ್ನು ನೀಡಿದ್ದೇನೆ' ಎಂದು ಹೇಳಿದರು. ಈಗ ಅವರು ನಿಯತವಾಗಿ ಪ್ರತಿ ತಿಂಗಳು ಚಂದಾವನ್ನು ನೀಡುತ್ತಿದ್ದಾರೆ.

ವೇಜ್‌ಬಾದನ್ ಜರ್ಮನಿಯ ಒಬ್ಬ ಸಹೋದರ ಹೇಳುತ್ತಾರೆ: ನನ್ನ ಅಸೈಲಂ ಕೇಸ್, ಒಬ್ಬ ಜಡ್ಜಿನ ಬಳಿಯಲ್ಲಿ ಇತ್ತು. ಅವರು ಅದನ್ನು ಮಂಜೂರು ಮಾಡುತ್ತಿರಲಿಲ್ಲ. ಒಂದು ಸಾವಿರ ಯೂರೋ ತಹ್ರೀಕ್ ಜದೀದಿಗೆ ಚಂದಾ ಪಾವತಿಸಲು ನಾನು ನಿಶ್ಚಯಿಸಿದೆ. ನನ್ನ ಕೇಸ್ ಆ ಜಡ್ಜಿನ ಬಳಿಯಿಂದ ಬೇರೊಬ್ಬ ಜಡ್ಜಿನ ಬಳಿಗೆ ಹೋಗುವಂತೆ ಅಲ್ಲಾಹನು ಮಾಡಿದನು. ಅಲ್ಲಾಹನ ಅನುಗ್ರಹದಿಂದ ಕೇಸ್ ಮಂಜೂರಾಯಿತು. ಹೀಗೆ ಅವರು ವಾಗ್ದಾನ ಮಾಡಿದ್ದನ್ನು ಈಡೇರಿಸಿದರು.

ಖಾದಿಯಾನ್‌ನಿಂದ ವಕೀಲುಲ್ ಮಾಲ್ ಸಾಹಿಬರು ಬರೆಯುತ್ತಾರೆ: ಕರುಳಾಯಿಯ ಒಬ್ಬ ಸಹೋದರನ ಚಂದಾ 5 ಲಕ್ಷ ರೂಪಾಯಿಯಾಗಿತ್ತು. ಅವರು ಸ್ವಲ್ಪ ಹಣವನ್ನು ತಮ್ಮ ವ್ಯಾಪಾರಕ್ಕಾಗಿ ಇರಿಸಿದ್ದರು. ಅದೇ ಸಮಯದಲ್ಲಿ ತಹ್ರೀಕ್ ಜದೀದ್ ಚಂದಾವನ್ನು ಸಂದಾಯ ಮಾಡಲು ಹೇಳಲಾಯಿತು. ಅವರು ಆ ಹಣವನ್ನು ಚಂದಕ್ಕೆ ಕೊಟ್ಟರು. ಅಲ್ಲಾಹನು ಅನುಗ್ರಹಿಸಿದನು. ಸ್ವಲ್ಪ ಸಮಯದಲ್ಲೇ, ಚಂದಾವಾಗಿ ನೀಡಿದ ಹಣಕ್ಕಿಂತ ಹಲವು ಪಟ್ಟು ಹೆಚ್ಚಿನ ಹಣ ಅವರ ಅಕೌಂಟಿನಲ್ಲಿ ಯಾರೋ ಒಬ್ಬರ ಕಡೆಯಿಂದ ಬಂದಿತು. ಅನಂತರ ಅವರು ಮತ್ತೂ ಹೆಚ್ಚಿನ ಹಣವನ್ನು ತಹ್ರೀಕ್ ಜದೀದಿಗಾಗಿ ನೀಡಿದರು.

(ಖಲೀಫತುಲ್ ಮಸೀಹರು ಲೋಕದೆಲ್ಲಡೆ ಮಾಡಲಾದ ಧನತ್ಯಾಗಗಳ ಹಲವು ವಿಶ್ವಾಸ ವರ್ಧಕ ಘಟನೆಗಳನ್ನು ವಿವರಿಸಿದರು. ಅನಂತರ ಹುಝೂರ್ ಹೇಳಿದರು:) ಅಲ್ಲಾಹನ ಅನುಗ್ರಹದಿಂದ ತಹ್ರೀಕ್ ಜದೀದಿನ 86ನೇ ವರ್ಷ ಅಕ್ಟೋಬರ್ 31ಕ್ಕೆ ಕೊನೆಗೊಂಡಿದೆ ಮತ್ತು 87ನೇ ವರ್ಷ ಶುರುವಾಗಿದೆ. ಈ ವರ್ಷ ಅಹ್ಮದಿಯಾ ಜಮಾಅತಿಗೆ ತಹ್ರೀಕ್ ಜದೀದಿನ ಸಾಂಪತ್ತಿಕ ವ್ಯವಸ್ಥೆಯಲ್ಲಿ ಒಂದು ಕೋಟಿ, 54 ಲಕ್ಷ ಪೌಂಡಿನ ಧನತ್ಯಾಗ ಮಾಡಲು ತೌಫೀಕ್ ಲಭಿಸಿತು. ಈ ವಸೂಲಿ ಕಳೆದ ವರ್ಷಕ್ಕಿಂತ ಎಂಟು ಲಕ್ಷ 82 ಸಾವಿರ ಪೌಂಡ್‌ನಷ್ಟು ಅಧಿಕವಿದೆ.

(ಹುಝೂರ್ ಮೊದಲ ಹತ್ತು ಸ್ಥಾನಗಳನ್ನು ವಿವರಿಸುತ್ತಾ ಹೇಳಿದರು:) ಮೊದಲ ಸ್ಥಾನ ಜರ್ಮನಿಯದ್ದಾಗಿದೆ. ಅನಂತರ ಬ್ರಿಟನ್. ಅದರ ನಂತರ ಅಮೇರಿಕದ್ದಾಗಿದೆ. ಪಾಕಿಸ್ತಾನದ ಹೆಸರು ಸಹ ನಡುವೆ ಬರುತ್ತದೆ. ಅಮೇರಿಕಕ್ಕೆ ಮೂರನೇ ಸ್ಥಾನವಿದೆ. ಅನಂತರ ಕೆನಡ, ಅನಂತರ ಮಿಡಲ್ ಈಸ್ಟಿನ ಒಂದು ದೇಶವಿದೆ. ಅನಂತರ ಭಾರತ, ಆಸ್ಟ್ರೇಲಿಯಾ, ಇಂಡೋನೇಶ್ಯ, ಘಾನ, ಅನಂತರ ಇನ್ನೊಂದು ಮಿಡಲ್ ಈಸ್ಟಿನ ಜಮಾಅತ್.

(ಹುಝೂರ್ ತ್ಯಾಗದ ದೃಷ್ಟಿಯಲ್ಲಿ ಭಾರತದ ಹತ್ತು ಜಮಾಅತುಗಳ ಹೆಸರನ್ನು ಹೇಳಿದರು:) ಕೋಯಂಬತ್ತೂರಿಗೆ ಮೊದಲನೇ ಸ್ಥಾನವಿದೆ. ಅನಂತರ ಅನುಕ್ರಮವಾಗಿ ಕರುಳಾಯಿ, ಖಾದಿಯಾನ್, ಪತ್ತಪಿರಿಯಂ, ಹೈದರಾಬಾದ್, ಕಣ್ಣೂರ್ ಟೌನ್, ಕೋಲ್ಕತ್ತ, ಕಾಲಿಕಟ್, ಬೆಂಗಳೂರು ಮತ್ತು ಮಾತೋಟಮ್.

ಮೊದಲ ಹತ್ತು ಸ್ಥಾನದಲ್ಲಿರುವ ರಾಜ್ಯಗಳು ಹೀಗಿವೆ: ಕೇರಳ ಮೊದಲ ಸ್ಥಾನದಲ್ಲಿದೆ, ಅನಂತರ ತಮಿಳುನಾಡು, ಕರ್ನಾಟಕ, ಜಮ್ಮು ಕಾಶ್ಮೀರ, ತೆಲಂಗಾಣ, ಪಂಜಾಬ್, ಒಡಿಶಾ, ಬಂಗಾಳ, ದೆಹಲಿ ಮತ್ತು ಮಹಾರಾಷ್ಟ್ರ. ಅಲ್ಲಾಹನು ಇವರೆಲ್ಲರ ಸಂಪತ್ತು ಮತ್ತು ಜೀವನದಲ್ಲಿ ಅಪರಿಮಿತವಾದ ಅನುಗ್ರಹವನ್ನು ಸುರಿಸಲಿ ಮತ್ತು ಅವರ ತ್ಯಾಗಗಳನ್ನು ಸ್ವೀಕರಿಸಲಿ. ಅದರೊಂದಿಗೆ ನಾನು ನವೆಂಬರ್ 1ಕ್ಕೆ ಶುರುವಾಗಿರುವ ತಹ್ರೀಕ್ ಜದೀದಿನ ಹೊಸ ವರ್ಷದ ಘೋಷಣೆಯನ್ನು ಮಾಡುತ್ತೇನೆ.

(ಹುಝೂರ್ ಹೇಳಿದರು:) ಈಗ ನಾನು ಒಂದು ವಿಷಯದ ಕಡೆಗೆ ನಿಮ್ಮ ಗಮನವನ್ನು ಸೆಳೆಯಲು ಇಚ್ಛಿಸುತ್ತೇನೆ. ಇಂದು ಬಹಳ ದುಆಗಳ ಆವಶ್ಯಕತೆಯಿದೆ. ನಾವು ನಮಗಾಗಿ ಮತ್ತು ನಮ್ಮ ಜಮಾಅತಿಗಾಗಿ ಪ್ರಾರ್ಥನೆಗಳನ್ನು ಮಾಡುತ್ತಿರುತ್ತೇವೆ. ಇತರ ಮುಸ್ಲಿಮರಿಗಾಗಿಯೂ ಪ್ರಾರ್ಥನೆಗಳನ್ನು ಮಾಡುವ ಆವಶ್ಯಕತೆಯಿದೆ. ಇಂದು ಮುಸ್ಲಿಮರ ವಿರುದ್ಧ ಮುಸ್ಲಿಮೇತರ ರಾಷ್ಟ್ರಗಳ ಕೆಲವು ನೇತಾರರು ಬಹಳ ದ್ವೇಷ ಮತ್ತು ಹಗೆಯ ಭಾವನೆಗಳನ್ನು ಹೊಂದಿರುವರು. ಅವರು ಪ್ರಜಾಪ್ರಭುತ್ವದ ಈ ಕಾಲಘಟ್ಟದಲ್ಲಿ ಸಾಮಾನ್ಯ ಜನರನ್ನು ದೇವನೆಂದು ಭಾವಿಸಿಕೊಂಡು ಅವರ ಇಚ್ಛೆ ಪ್ರಕಾರ, ತಮ್ಮ ಹೇಳಿಕೆ ಮತ್ತು ನೀತಿಗಳನ್ನು ಮಾಡಲು ಪ್ರಯತ್ನಿಸುತ್ತಾರೆ. ಜನಸಾಮಾನ್ಯರಲ್ಲಿ ಸಹ ಬಹುಭಾಗಕ್ಕೆ ಇಸ್ಲಾಮಿನ ಬಗ್ಗೆ ಸರಿಯಾದ ಪರಿಚಯವಿಲ್ಲದ ಕಾರಣದಿಂದ, ಅವರು ಕೂಡ ಮುಸ್ಲಿಮರ ವಿರೋಧಿಗಳಾಗಿರುವರು. ಹೇಗಿದ್ದರೂ ನಾವು ದುಆ ಮಾಡುತ್ತಾ, ಇಸ್ಲಾಮಿನ ನೈಜತೆಯೇನೆಂದು ಲೋಕಕ್ಕೆ ತಿಳಿಸಿಕೊಡಬೇಕಾಗಿದೆ. ಇಸ್ಲಾಮ್ ಬಿಕ್ಕಟ್ಟಿಗೆ ಗುರಿಯಾದ ಧರ್ಮವಾಗಿದೆ ಎಂದು ಫ್ರಾನ್ಸಿನ ಪ್ರಧಾನಿ ಕೆಲವು ದಿನಗಳ ಹಿಂದೆ ಹೇಳಿಕೆಯನ್ನು ನೀಡಿದ್ದಾರೆ. ಯಥಾರ್ಥದಲ್ಲಿ ಸಂಕಷ್ಟಕ್ಕೆ ಸಿಲುಕಿರುವುದು ಅವರ ಧರ್ಮವೇ ಆಗಿದೆ. ಅಲ್ಲಾಹನ ಅನುಗ್ರಹದಿಂದ ಇಸ್ಲಾಂ ಅಂತು ಜೀವಂತ ಧರ್ಮವಾಗಿದೆ ಹಾಗೂ ಅಭಿವೃದ್ಧಿಗೊಳ್ಳುತ್ತಿರುವ ಧರ್ಮವಾಗಿದೆ. ಅದು ಫಲಿಸುತ್ತಾ ಪುಷ್ಪಿಸುತ್ತಾ ಇದೆ.

ಅಲ್ಲಾಹನು ಎಲ್ಲ ಕಾಲದಲ್ಲೂ ಅದರ ಸಂರಕ್ಷಣೆಯ ಜವಾಬ್ದಾರಿಯನ್ನು ಹೊತ್ತಿದ್ದಾನೆ. ಈ ಕಾಲದಲ್ಲೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ಅದರ ಸಂದೇಶ ಲೋಕದ ನಾಲ್ಕೂ ಕಡೆಗಳಲ್ಲಿ ಹರಡುತ್ತಿದೆ. ಸತ್ಯವೇನೆಂದರೆ, ಮುಸ್ಲಿಮರ ಎಡೆಯಲ್ಲಿ ಪರಸ್ಪರ ಐಕ್ಯವಿಲ್ಲವೆಂದು ಇಸ್ಲಾಮಿನ ವಿರೋಧಿಗಳಿಗೆ ಚೆನ್ನಾಗಿ ಗೊತ್ತಿದೆ. ಆದ್ದರಿಂದ ಅವರು ಹೀಗೆ ವರ್ತಿಸುತ್ತಾರೆ ಮತ್ತು ಹೇಳಿಕೆಗಳನ್ನು ನೀಡುತ್ತಾರೆ. (ಈ ಸಂದರ್ಭದಲ್ಲಿ ಹುಝೂರ್ ಕೆನಡಾದ ಪ್ರಧಾನ ಮಂತ್ರಿಯನ್ನು ಪ್ರಶಂಸಿಸುತ್ತಾ ಅವರ ಬಗ್ಗೆ ಪ್ರಸ್ತಾಪಿಸಿದರು. ಫ್ರಾನ್ಸಿನ ಪ್ರಧಾನ ಮಂತ್ರಿಯ ಹೇಳಿಕೆಗೆ ಅವರು ಉತ್ತಮ ಪ್ರತಿಕ್ರಿಯೆ ನೀಡಿರುವರು. ಅಲ್ಲಾಹನು ಅವರ ಮನಸ್ಸನ್ನು ಇನ್ನೂ ವಿಶಾಲಗೊಳಿಸಲು ಪ್ರಾರ್ಥಿಸಲಿಕ್ಕಾಗಿ ಜಮಾಅತಿನ ಸಹೋದರರೊಡನೆ ಹುಝೂರ್ ಹೇಳಿದರು.) ಮುಸ್ಲಿಮರು ಐಕ್ಯದಿಂದಿದ್ದಾರೆ ಮತ್ತು ಅವರು ಒಂದೇ ಅಲ್ಲಾಹ್ ಹಾಗೂ ಒಂದೇ ರಸೂಲನ್ನು ನಂಬುವವರಾಗಿದ್ದಾರೆ ಮತ್ತು ಅದಕ್ಕಾಗಿ ತ್ಯಾಗಗಳನ್ನು ಮಾಡಲು ಅವರಿಗೆ ಗೊತ್ತಿದೆ ಎಂದು ಲೋಕಕ್ಕೆ ಮನವರಿಕೆಯಾದರೆ, ಎಂದಿಗೂ ಮುಸ್ಲಿಮೇತರ ಲೋಕದಿಂದ ಇಂತಹ ವರ್ತನೆಗಳು ಉಂಟಾಗುತ್ತಿರಲಿಲ್ಲ. ಎಂದಿಗೂ ಯಾವುದೇ ಪತ್ರಿಕೆಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವ್ಯಂಗ್ಯ ಚಿತ್ರಗಳನ್ನು ಪ್ರಕಟಿಸುವ ಧೈರ್ಯ ಬರುತ್ತಿರಲಿಲ್ಲ. ಡೆನ್ಮಾರ್ಕ್ ಮತ್ತು ಫ್ರಾನ್ಸಿನಲ್ಲಿ ಕೆಲವು ವರ್ಷಗಳ ಹಿಂದೆ ವ್ಯಂಗ್ಯಚಿತ್ರಗಳನ್ನು ಮುದ್ರಿಸಲಾದಾಗ, ಅಹ್ಮದಿಯಾ ಜಮಾಅತೇ ಸರಿಯಾದ ರೀತಿಯಲ್ಲಿ ಪ್ರತಿಕ್ರಿಯಿಸಿತ್ತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸುಂದರವಾದ ಜೀವಿತ ಮಾದರಿಯನ್ನು ಅವರ ಮುಂದಿರಿಸಿತ್ತು. ಇಂದು ಸಹ ನಾವು ಇದೇ ಕೆಲಸವನ್ನು ಮಾಡುತ್ತಿದ್ದೇವೆ. ಕೆಲವು ತಲೆಕೆಟ್ಟವರು ಇಸ್ಲಾಮಿನ ಹೆಸರಲ್ಲಿ ಮಾಡಿದ ತಪ್ಪಾದ ಕೃತ್ಯಗಳಿಗೆ ಇಸ್ಲಾಂ ಎಂದು ಹೆಸರಿಸಬೇಡಿರಿ ಎಂದು ನಾವು ಹೇಳುತ್ತೇವೆ. ಯಾವುದಾದರೂ ವ್ಯಕ್ತಿಯ ತಪ್ಪಾದ ಕೃತ್ಯಗಳ ಕಾರಣದಿಂದ ಇಸ್ಲಾಮಿನ ಅಧ್ಯಾಪನೆ ಮತ್ತು ಮುಸ್ಲಿಮರಿಗೆ ಬಿಕ್ಕಟ್ಟು ಬಂದೊದಗಿದೆ ಎಂದು ಹೇಳಿಕೆ ನೀಡಿ, ಅನಂತರ ಇದು ಮುಸ್ಲಿಮರ ವಿರುದ್ಧ ನಮ್ಮ ಹೋರಾಟವಾಗಿದೆ ಮತ್ತು ಈ ಹೋರಾಟವನ್ನು ನಾವು ಜಾರಿಯಲ್ಲಿರುಸುತ್ತೇವೆ ಎಂದೆಲ್ಲ ಹೇಳಿಕೆಯನ್ನು ನೀಡಿ ತಮ್ಮ ಜನರನ್ನು ಇನ್ನೂ ಹೆಚ್ಚು ರೊಚ್ಚಿಗೆಬ್ಬಿಸುವುದು ಯಾವುದೇ ರಾಷ್ಟ್ರದ ಪ್ರಧಾನಿ ಮಾಡಬೇಕಾದ ಕೆಲಸವಲ್ಲ. ತಪ್ಪಾದ ಕೃತ್ಯಗಳನ್ನು ಮಾಡಲು ಆ ವ್ಯಕ್ತಿಗಳನ್ನು ಪ್ರೇರೇಪಿಸಿದ್ದು ಸಹ ಇವರೇ ಆಗಿದ್ದಾರೆ.

ಈ ರೀತಿಯ ವ್ಯಂಗ್ಯಚಿತ್ರಗಳನ್ನೆಲ್ಲ ಮಾಡುವುದನ್ನು ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿಂದನೆ ಮಾಡುವುದನ್ನು ಒಬ್ಬ ಸ್ವಾಭಿಮಾನಿಯಾದ ಮುಸ್ಲಿಮನು ಸಹಿಸಲಾರನು. ಇಂತಹ ಕೃತ್ಯಗಳು ಕೆಲವು ಮುಸ್ಲಿಮರ ಭಾವನೆಗಳನ್ನು ರೊಚ್ಚಿಗೆಬ್ಬಿಸಬಹುದು. ರೊಚ್ಚಿಗೆಬ್ಬಿಸುತ್ತಿವೆ. ಅಂತಹ ಮುಸ್ಲಿಮರಿಂದ ಕಾನೂನು ವಿರುದ್ಧವಾದ ಯಾವುದಾದರೂ ಕೃತ್ಯಗಳು ನಡೆದರೆ, ಅದಕ್ಕೆ ಈ ಮುಸ್ಲಿಮೇತರ ಜನರೇ ಜವಾಬ್ದಾರರಾಗಿರುತ್ತಾರೆ. ಈ ಆಡಳಿತ ಮತ್ತು ತಥಾಕಥಿತ ಸ್ವಾತಂತ್ರ್ಯವೇ ಜವಾಬ್ದಾರಿಯಾಗಿರುತ್ತವೆ.

ನಾವಂತು ನಮಗೆ ಸಾಧ್ಯವಾದಷ್ಟು, ಕಾನೂನಿನ ಪರಿಮಿತಿಯಲ್ಲಿ ಇದ್ದುಕೊಂಡು ಇಸ್ಲಾಂ ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನದ ವಿರುದ್ಧ ನಡೆಯುವಂತಹ ಕೃತ್ಯಗಳಿಗೆ ಉತ್ತರ ನೀಡುತ್ತೇವೆ, ಇನ್ನು ಮುಂದೆ ಸಹ ನೀಡುವೆವು. ಅದರ ಪ್ರಭಾವ ಸಹ ಆಗುತ್ತದೆ. ಕಾನೂನಿನ ಪರಿಮಿತಿಯಲ್ಲಿದ್ದುಕೊಂಡು ಪ್ರತಿಯೊಂದು ಹೆಜ್ಜೆಯನ್ನು ಹಾಕಬೇಕೆಂಬ ಪರಿಹಾರ ಮಾರ್ಗವನ್ನು ನಾವು ಮುಂದಿರುಸುತ್ತೇವೆ. ಎಲ್ಲಕ್ಕಿಂತ ಮಿಗಿಲಾಗಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ದುರೂದ್ ಮತ್ತು ಪ್ರಾರ್ಥನೆಗಳನ್ನು ಮಾಡಬೇಕಾಗಿದೆ. ಮುಸ್ಲಿಮ್ ಜನತೆ ಸ್ಥಿರವಾದ ಪರಿಹಾರವನ್ನು ಬಯಸುವುದಾದರೆ, ಸಮಸ್ತ ಮುಸ್ಲಿಮ್ ಲೋಕವು ಒಗ್ಗಟ್ಟಿನಿಂದ ಇರಬೇಕಾಗಿದೆ. 54, 55 ಮುಸ್ಲಿಮ್ ರಾಷ್ಟ್ರಗಳು ಒಂದೇ ಸ್ವರದಲ್ಲಿ ಧ್ವನಿ ಎತ್ತುತ್ತಿದ್ದರೆ, ಫ್ರಾನ್ಸಿನ ಪ್ರಧಾನಿ ಅಂತಿಂಥ ಮಾತುಗಳನ್ನು ಹೇಳುತ್ತಿರಲಿಲ್ಲ. ಅವರಿಗೆ ಕ್ಷಮೆಯಾಚಿಸಬೇಕಾಗಿ ಬರುತ್ತಿತ್ತು. ಮಂಡಿಯೂರಬೇಕಾಗಿ ಬರುತ್ತಿತ್ತು.

ಕೆಲವು ಸಮಯದ ಹಿಂದೆ, ಕೋವಿಡ್‌ನ ದಿನಗಳಲ್ಲಿ, ನಾನು ಕೆಲವು ದೇಶದ ಪ್ರಧಾನಿಗಳಿಗೆ ಮತ್ತೊಮ್ಮೆ ಪತ್ರಗಳನ್ನು ಬರೆದಿದ್ದೆ. ಫ್ರಾನ್ಸಿನ ಪ್ರಧಾನಿಗೂ ಬರೆದಿದ್ದೆ. ಅದರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಲ್ಲೇಖದೊಂದಿಗೆ ಮುನ್ನೆಚ್ಚರಿಕೆಯನ್ನೂ ನೀಡಿದ್ದೆ. ಈ ಶಿಕ್ಷೆ ಮತ್ತು ಆಪತ್ತುಗಳು ದುಷ್ಕೃತ್ಯಗಳ ಕಾರಣದಿಂದ ಬರುತ್ತವೆ. ಆದ್ದರಿಂದ ನೀವು ಇದರ ಕಡೆಗೆ ಗಮನವಹಿಸಬೇಕು. ದೌರ್ಜನ್ಯಗಳನ್ನು ಕೊನೆಗೊಳಿಸಿರಿ. ನ್ಯಾಯ – ನೀತಿಯನ್ನು ನೆಲೆಗೊಳ್ಳಿಸಿರಿ ಎಂದು ಹೇಳಿದ್ದೆ. ಸತ್ಯದ ಆಧಾರದಲ್ಲಿ ಹೇಳಿಕೆಯನ್ನು ನೀಡಲು ಅವರೊಡನೆ ನಾನು ಹೇಳಿದ್ದೆ. ನಾವು ನಮ್ಮ ಕರ್ತವ್ಯವನ್ನು ಈಡೇರಿಸಿದ್ದೇವೆ ಮತ್ತು ಈಡೇರಿಸುತ್ತಿರುತ್ತೇವೆ. ಇವುಗಳನ್ನು ಮನವರಿಕೆ ಮಾಡುವುದು ಅಥವಾ ಮಾಡದಿರುವುದು ಅವರ ಇಷ್ಟಕ್ಕೆ ಬಿಟ್ಟದ್ದು. ಹೇಗಿದ್ದರೂ ನಾವು ಮುಸ್ಲಿಂ ಸಮುದಾಯವನ್ನು ಪ್ರಾರ್ಥನೆಗಳಲ್ಲಿ ಮರೆಯಬಾರದು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧರಾದ ದಾಸ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಗುರುತಿಸಲು ಅವರಿಗೆ ಅಲ್ಲಾಹನು ಸೌಭಾಗ್ಯ ನೀಡಲಿ.

ದೇವನಿಂದ ದೂರ ಸರಿಯುತ್ತಾ ಹೋಗುವುದರಿಂದ ನಾಶವಲ್ಲದೆ ಬೇರೇನೂ ಆಗದು ಎಂದು ಲೋಕವು ಯೋಚಿಸಬೇಕಾಗಿದೆ. ಲೋಕವನ್ನು ಅಲ್ಲಾಹನ ಏಕದೇವ ವಿಶ್ವಾಸದ ಅಡಿಯಲ್ಲಿ ತರಲು ನಾವು ಪ್ರಯತ್ನಿಸಬೇಕಾಗಿದೆ. ತಹ್ರೀಕ್ ಜದೀದಿನ ಉದ್ದೇಶ ಸಹ ಹಝ್ರತ್ ಪೈಗಂಬರ್

ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಾವುಟದ ಕೆಳಗೆ ತರುವುದೇ ಆಗಿದೆ. ಅಲ್ಲಾಹನು ನಮಗೆ ಅದರ ತೌಫೀಕ್ ನೀಡಲಿ. ಅದಲ್ಲದೆ ಲೋಕದ ಸಾಧಾರಣ ಸ್ಥಿತಿಗತಿಗಳ ಬಗ್ಗೆಯೂ ದುಆ ಮಾಡಿರಿ. ಜಗತ್ತು ಬಹಳ ವೇಗದಿಂದ ವಿಪತ್ತಿನ ಕಡೆಗೆ ಸಾಗುತ್ತಿದೆ. ಈ ರೋಗದಿಂದ ಮುಕ್ತಿ ಪಡೆಯುವಷ್ಟರಲ್ಲಿ ಇನ್ನೊಂದು ವಿಪತ್ತು ಮಹಾಯುದ್ಧದ ರೂಪದಲ್ಲಿ ಬರದಿರಲಿ. ಅಲ್ಲಾಹನು ಲೋಕಕ್ಕೆ ಬುದ್ಧಿ ಮತ್ತು ವಿವೇಕವನ್ನು ನೀಡಲಿ. ಏಕದೇವನನ್ನು ಗುರುತಿಸಿ ಅವನಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸುವವರಾಗಲಿ – ಆಮೀನ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

*At, Masjid Mubarak, Islamabad, Tilford, UK, On 06-11-2020*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon